ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ದಿನಾಂಕ: 29.10.2024 ರಂದು ನಡೆದ 48ನೇಯ ಹಣಕಾಸು ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 48ನೇಯ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 29.10.2024 ರಂದು ಮಂಗಳವಾರ ಬೆಳಗ್ಗೆ 10.30ಕ್ಕೆ ನಡೆಯಿತು.

ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:

1. ಡಾ. ಎಸ್ ಅಹಲ್ಯ, ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. ಶ್ರೀ ವಿಶ್ವನಾಥ ಪಿ ಹಿರೇಮಠ. ಕುಲಸಚಿವರು, ಕಸಂವಿ — ಸದಸ್ಯರು
3. ಶ್ರೀಮತಿ ಉಮಾ ಕೆ, ಜಂಟಿ ಕಾರ್ಯದರ್ಶಿಗಳು — ಸದಸ್ಯರು
   ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ
4. ಶ್ರೀ. ಕುಮಾರ ಎನ್, — ಸದಸ್ಯರು
   ಉಪ ಕಾರ್ಯದರ್ಶಿ, (ತಾಂತ್ರಿಕ ಶಿಕ್ಷಣ ಹಾಗೂ ಯೋಜನೆ)
   ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
5. ಪ್ರೊ. ವಿ ಗಿರೀಶ್‌ಚಂದ್ರ, ಡೀನ್, ಕಸಂವಿ — ಸದಸ್ಯರು
6. ಡಾ. ಭರತ್ ಕೆ.ಎ, ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | |
|---|---|
| ವಿಷಯ 1 | 47ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 11.07.2024ರ ನಡಾವಳಿಯನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ. |
| ನಿರ್ಣಯ | ಸಭೆಯು ಸ್ಥಿರೀಕರಿಸಿತು. |
| ವಿಷಯ 2 | 47ನೇ ಸಭೆಯ ನಡಾವಳಿಯಂತೆ ಕ್ರಮವಹಿಸಲಾಗಿರುವ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ:11.07.2024ರ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗಿದೆ, ಅದರಂತೆ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಸಭೆಯು ಅನುಮೋದಿಸಿತು. |

| | |
|---|---|
| ವಿಷಯ 3 | **ಜೂನ್ 2024 ರಿಂದ ಸೆಪ್ಟಂಬರ್2024 ರವರಿಗಿನ ನಾಲ್ಕು ತಿಂಗಳ ಜಮಾ–ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಜೂನ್ 2024 ರಿಂದ ಸೆಪ್ಟಂಬರ್2024 ರವರಿಗಿನ ನಾಲ್ಕು ತಿಂಗಳ ಜಮಾ–ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ. ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು.** |
| ವಿಷಯ 4 | **ಮಾನ್ಯ ಕುಲಪತಿಗಳಿಗೆ ಹೊಸ ಕಾರನ್ನು ಖರೀದಿಸುವ ಬಗ್ಗೆ.** |
| ಟಿಪ್ಪಣಿ | ಮಾನ್ಯ ಕುಲಪತಿಗಳಿಗೆ 2015ರಲ್ಲಿ ಟೊಯೋಟಾ ಇನೋವಾ (ಸಂಖ್ಯೆ: ಕೆಎ04 ಎಂಕ್ಯೂ 7762) ಕಾರನ್ನು ಖರೀದಿಸಲಾಗಿತ್ತು. ಈ ಕಾರು ಈಗಾಗಲೇ 2.70 ಲಕ್ಷ ಕಿ.ಮೀ. ಗಿಂತಲೂ ಅಧಿಕವಾಗಿ ಚಲಿಸಿರುತ್ತದೆ. ಹೊಸ ಕಾರು ಖರೀದಿಸಲು ಸರ್ಕಾರಿ ನಿಯಾಮಾನುಸಾರ ಕನಿಷ್ಠ 07 ವರ್ಷಗಳು ಅಥವಾ 2.00 ಲಕ್ಷ ಕಿ.ಮೀ ದೂರವನ್ನು ಕ್ರಮಿಸುವುದು ಅಗತ್ಯವಾಗಿರುತ್ತದೆ. ಈಗಿರುವ ಇನೋವಾ ಕಾರು ಈ ಎರಡೂ ನಿಯಮಗಳನ್ನು ಪೂರೈಸಿರುತ್ತದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ರಾಜ್ಯವ್ಯಾಪಿ ವಿಶ್ವವಿದ್ಯಾಲಯವಾಗಿರುವುದರಿಂದ ಮಾನ್ಯ ಕುಲಪತಿಗಳು ರಾಜ್ಯ ಪ್ರವಾಸ ಕೈಗೊಳ್ಳಬೇಕಿರುವುದರಿಂದ ಹಾಲಿ ಇರುವ ಕಾರು ಪದೇ ಪದೇ ರಿಪೇರಿ ಬರುತ್ತಿದೆ. ಪ್ರಸ್ತುತ ಕುಲಪತಿಗಳು ಮಹಿಳಾ ಕುಲಪತಿಗಳಾಗಿರುವುದರಿಂದ ಹಾಗೂ ಈ ಕಾರು ದೂರದ ಪ್ರವಾಸಕ್ಕೆ ಯೋಗ್ಯವಿಲ್ಲದ ಕಾರಣ ಭದ್ರತೆಯ ಹಿತದೃಷ್ಟಿಯಿಂದ ಹೊಸ ಕಾರಿನ ಅವಶ್ಯಕತೆವಿರುತ್ತದೆ. ಆದ್ದರಿಂದ ಹೊಸ Innova Crysta G. diesel (Basic Model) ಕಾರನ್ನು ಲಭ್ಯವಿರುವ ಆಂತರಿಕ ಸಂಪನ್ಮೂಲದಿಂದ ಖರೀದಿಸಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಆಂತರಿಕ ಸಂಪನ್ಮೂಲದಿಂದ ಖರೀದಿಸಲು ಹಾಗೂ ಖರೀದಿಯ ನಂತರ ಎಲ್ಲಾ ದಾಖಲೆಗಳೊಂದಿಗೆ ಸರ್ಕಾರದ ಗಮನಕ್ಕೆ ತರಲು ಸಭೆಯು ಅನುಮೋದಿಸಿತು.** |
| ವಿಷಯ 5 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪರಿಷ್ಕೃತ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪರಿಷ್ಕೃತ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಪರಿಷ್ಕೃತ ಪ್ರಸ್ತಾವನೆಯನ್ನು ನಿಯಾಮಾನುಸಾರ ಸರಿಯಾದ ಕ್ರಮದಲ್ಲಿ ಪ್ರಸ್ತಾವನೆಯನ್ನು ತಯಾರಿಸಿ ಸರ್ಕಾರದ ಅನುಮತಿಗಾಗಿ ಸಲ್ಲಿಸಲು ಸಭೆಯು ಅನುಮೋದಿಸಿತು.** |
| ವಿಷಯ 6 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳಿಗೆ ಸಂಬಂಧಪಟ್ಟ ಭತ್ಯೆಗಳನ್ನು ಪರಿಷ್ಕರಿಸಿರುವುದನ್ನು ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳಿಗೆ ಸಂಬಂಧಪಟ್ಟ ಭತ್ಯೆಗಳನ್ನು ಪರಿಷ್ಕರಿಸಿರುವುದನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಮಿತಿಯ ವರದಿಯನ್ನು ಪರೀಶೀಲಿಸಿ ಕೆಸಿಎಸ್ಆರ್ ನಿಯಾಮಾನುಸಾರ ಕ್ರಮಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 7 | **ಹೊರಗುತ್ತಿಗೆ ಸಿಬ್ಬಂದಿಗಳ ವೇತನವನ್ನು ಮೂಲ ವೇತನಕ್ಕೆ 15% ಹೆಚ್ಚಿಸುವ ಬಗ್ಗೆ ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | ಹಾಲಿ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ವೇತನದಲ್ಲಿ ಮೂಲ ವೇತನದಲ್ಲಿ ನಿಯಾಮಾನುಸಾರ 15% ಹೆಚ್ಚಿಸುವ ಬಗ್ಗೆ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **Labour ACT ಪ್ರಕಾರ ಕ್ರಮಕೈಗೊಳ್ಳಲು ಅನುಮೋದನೆ ನೀಡಿತು.** |

| | |
|---|---|
| ವಿಷಯ 8 | **ರಾಜ್ಯಸ್ತರೀಯ/ರಾಷ್ಟ್ರ ಸ್ತರೀಯ ಸ್ಪರ್ಧೆಗಳಲ್ಲಿ ಹಾಗೂ ಕಾರ್ಯಾಗಾರ/ವಿಚಾರ ಸಂಕೀರಣ/ತರಬೇತಿ ಶಿಬಿರಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಯಾಣ ಭತ್ಯೆ ಪಾವತಿಸುವ ಬಗ್ಗೆ.** |
| ಟಿಪ್ಪಣಿ | ರಾಜ್ಯಸ್ತರೀಯ/ರಾಷ್ಟ್ರ ಸ್ತರೀಯ ಸ್ಪರ್ಧೆಗಳಲ್ಲಿ ಹಾಗೂ ಕಾರ್ಯಾಗಾರ/ವಿಚಾರ ಸಂಕೀರಣ/ತರಬೇತಿ ಶಿಬಿರಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಸಾಮಾನ್ಯ ಪ್ರಯಾಣ ಭತ್ಯೆ ದರವನ್ನು ಪಾವತಿಸಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಯೋಜನೆಗಳಿಂದ ಬಂದಂತಹ ಅನುದಾನದಿಂದ ವಿದ್ಯಾರ್ಥಿಗಳಿಗೆ ಸಾಮಾನ್ಯ ಬಸ್ ದರವನ್ನು ನೀಡಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 9 | **Indian Knowledge Systems Divison(IKS)ನಿಂದ ವ್ಯಾಕರಣ ವಿಭಾಗದ "ಶಾಸ್ತ್ರಕೋಶ ಯೋಜನೆಗಾಗಿ" ರೂ.7.50ಲಕ್ಷ ಮಂಜೂರಾಗಿರುವುದರಿಂದ ICICI ಬ್ಯಾಂಕಿನಲ್ಲಿ ZBSA A/C ತೆರೆಯಲಾಗಿದ್ದು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | Indian Knowledge Systems Divison(IKS)ನಿಂದ ವ್ಯಾಕರಣ ವಿಭಾಗದ "ಶಾಸ್ತ್ರಕೋಶ ಯೋಜನೆಗಾಗಿ" ರೂ.7.50ಲಕ್ಷ ಮಂಜೂರಾಗಿರುವುದರಿಂದ ICICI ಬ್ಯಾಂಕಿನಲ್ಲಿ ZBSA A/C ತೆರೆಯಲು ಸರ್ಕಾರದ ಅನುಮತಿಗಾಗಿ ಪತ್ರವನ್ನು ಸಲ್ಲಿಸಿ, ಪ್ರಶಾಸನ ಸಮಿತಿಯಲ್ಲಿ ಅನುಮೋದನೆ ಪಡೆದು 30.09.2024 ಕೊನೆ ದಿನಾಂಕವಾದ್ದರಿಂದ ಖಾತೆಯನ್ನು ತೆರೆಯಲಾಗಿದೆ. ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು.** |
| ವಿಷಯ 10 | **ಪರೀಕ್ಷಾಂಗಕ್ಕೆ ಕಲರ್ ಜೆರಾಕ್ಸ್ ಯಂತ್ರವನ್ನು ಖರೀದಿಸುವ ಬಗ್ಗೆ.** |
| ಟಿಪ್ಪಣಿ | ಕುಲಸಚಿವರು(ಮೌಲ್ಯಮಾಪನ) ಇವರ ಮನವಿಯಂತೆ ಪರೀಕ್ಷಾಂಗ ವಿಭಾಗಕ್ಕೆ ಕಲರ್ ಜೆರಾಕ್ಸ್‌ನ ಯಂತ್ರದ ಅವಶ್ಯಕತೆಯಿದ್ದು ಇದರ ಖರೀದಿಗೆ ಅಂದಾಜು ರೂ.8.00 ಲಕ್ಷಗಳು ತಗಲಬಹುದೆಂದು ಖರೀದಿಗಾಗಿ ಮನವಿ ಸಲ್ಲಿಸಿರುತ್ತಾರೆ. ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ನಿಯಾಮಾನುಸಾರ ಪ್ರಕ್ರಿಯೆಗಳೊಂದಿಗೆ ಖರೀದಿಸಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 11 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "Statutes Governing the Affiliation Of Colleges/Institutions Under the Jurisdiction Of Karnataka Samskrit Vishwavidyalaya" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "Statutes Governing the Affiliation Of Colleges/Institutions Under the Jurisdiction Of Karnataka Samskrit Vishwavidyalaya" ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ದಿನಾಂಕ: 09.05.2024ರ ಸರ್ಕಾರದ ಪತ್ರದಲ್ಲಿ ಪ್ರಸ್ತುತ ಇರುವ ಕುಲಪತಿ ಮತ್ತು ಕುಲಸಚಿವರ ಸಹಿಯೊಂದಿಗೆ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು ಪರಿಷ್ಕೃತ ಪರಿನಿಯಮವನ್ನು ಸಲ್ಲಿಸುವಂತೆ ಸೂಚಿಸಿರುವುದರಿಂದ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು.** |

| | |
|---|---|
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ಇತರೆ ವಿಷಯಗಳು** |
| ವಿಷಯ 12 | **ಜ್ಞಾನಪರ/ವೃತ್ತಿಪರ ಕೋರ್ಸ್‌ಗಳಿಗೆ ಶುಲ್ಕ ಪರಿಷ್ಕರಣೆ ಮಾಡುವ ಬಗ್ಗೆ.** |
| ಟಿಪ್ಪಣಿ | ಜ್ಞಾನಪರ/ವೃತ್ತಿಪರ ಕೋರ್ಸ್‌ಗಳಿಗೆ ಶುಲ್ಕ ಪರಿಷ್ಕರಣೆ ಮಾಡುವ ಬಗ್ಗೆ ಸಭೆಯ ಅನುಮೋದನೆಗಾಗಿ |

| | | | | |
|---|---|---|---|---|
| | ಮಂಡಿಸಿದೆ. | | | |
| ನಿರ್ಣಯ | ಕ್ರ.ಸಂ | ವಿಷಯಗಳು | ಜ್ಞಾನಪರ ಕೋರ್ಸ್‌ಗಳಿಗೆ ಪರಿಷ್ಕೃತ ಶುಲ್ಕಗಳು | ವೃತ್ತಿಪರ ಕೋರ್ಸ್‌ಗಳಿಗೆ (ಯೋಗ, ಜ್ಯೋತಿಷ್ಯ ಮತ್ತು ವಾಸ್ತು ತರಗತಿಗಳಿಗೆ ಪರಿಷ್ಕೃತ ಶುಲ್ಕಗಳು |
| | 01 | ಸರ್ಟಿಫಿಕೇಟ್ ಕೋರ್ಸ್ | 750/– | 2500/– |
| | 02 | ಡಿಪ್ಲೋಮಾ | 2500/– | 3500/– |
| | 03 | ಪಿ.ಜಿ ಡಿಪ್ಲೋಮಾ | 4000/– | 5000/– |
| | ಮೇಲ್ಕಂಡ ಪರಿಷ್ಕೃತ ಶುಲ್ಕಗಳಿಗೆ ಸಭೆಯು ಅನುಮೋದನೆ ನೀಡಿತು. | | | |
| ವಿಷಯ 13 | ದೂರ ಶಿಕ್ಷಣ ಮತ್ತು ಮುಕ್ತ ಅಧ್ಯಯನ ಪ್ರಾರಂಭಿಸುವ ಬಗ್ಗೆ. | | | |
| ಟಿಪ್ಪಣಿ | ದೂರ ಶಿಕ್ಷಣ ಮತ್ತು ಮುಕ್ತ ಅಧ್ಯಯನ ತರಗತಿ ಪ್ರಾರಂಭಿಸುವ ಬಗ್ಗೆ ಈಗಾಗಲೇ 40ನೇ ಪ್ರಶಿಕ್ಷಣ ಸಭೆಯಲ್ಲಿ ಹಾಗೂ 71ನೇ ಪ್ರಶಾಸನ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಈ ಸಂಬಂಧ ಯುಜಿಸಿಗೆ ಆನ್ ಲೈನ್ ಮುಖಾಂತರ ಅರ್ಜಿ ಸಲ್ಲಿಸಿ ಯುಜಿಸಿ ಒಪ್ಪಿದ್ದಲ್ಲಿ ಈ ತರಗತಿಗಳನ್ನು ಪ್ರಾರಂಭಿಸಲು ಅಂದಾಜು 20 ಲಕ್ಷ ಅನುದಾನ ಬೇಕಾಗಿರುವುದರಿಂದ ಸಭೆಯ ಅನುಮೋದನೆಗಾಗಿ ಮಂಡಿಸಿದೆ. | | | |
| ನಿರ್ಣಯ | ಸಭೆಯು ಯುಜಿಸಿ ಒಪ್ಪಿದ್ದಲ್ಲಿ ತರಗತಿಗಳನ್ನು ಪ್ರಾರಂಭಿಸಲು ಅಂದಾಜು 20ಲಕ್ಷಗಳಿಗೆ ಬಜೆಟ್ ಅನುಮೋದನೆ ನೀಡಿತು. | | | |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

(ಡಾ. ಭರತ್ ಕೆ.ಎ)
ಹಣಕಾಸು ಅಧಿಕಾರಿಗಳು
ಸದಸ್ಯ ಕಾರ್ಯದರ್ಶಿ

(ಡಾ. ಎಸ್. ಅಹಲ್ಯ)
ಕುಲಪತಿಗಳು
ಅಧ್ಯಕ್ಷರು

ದಿನಾಂಕ: 29.10.2024